# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ನೋಡಲ್ ಅಧಿಕಾರಿ ವಾರ್ಡ್ ಸಂಖ್ಯೆ 166 ಕರೀಸಂದ್ರ, ವಾರ್ಡ್ ಕಛೇರಿ, ಬೆಂಗಳೂರು,**

---

**ದಿನಾಂಕ: ೦೨.೦೭.೨೦೨೨ ರಂದು ಬೆಳಗ್ಗೆ ೧೧:೦೦ ಗಂಟೆಗೆ ವಾರ್ಡ್ ಸಂಖ್ಯೆ ೧೬೬ ಕರೀಸಂದ್ರ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡುವಳಿಗಳು.**

***ಹಾಜರಿದ್ದ ಅಧಿಕಾರಿಗಳು:-***

1. ಶ್ರೀ. ಪ್ರದೀಪ್ ರಾಥೋಡ್ – ಅಧ್ಯಕ್ಷರು ಮತ್ತು ನೋಡೆಲ್ ಅಧಿಕಾರಿಗಳು.
2. ಶ್ರೀ. ಪ್ರಕಾಶ್ – ಸಹಾಯಕ ಅಭಿಯಂತರರು (ವಾರ್ಡ್ 166 ಕರೀಸಂದ್ರ)
3. ಶ್ರೀ. ನವೀನ್ ಕುಮಾರ್. ಎಸ್ – ಸಹಾಯಕ ಅಭಿಯಂತರರು ಮತ್ತು ಸಂಚಾಲಕರು (ಕಿಯೋನಿಕ್ಸ್) (ವಾರ್ಡ್ 166 ಕರೀಸಂದ್ರ)
4. ಶ್ರೀ. ನರಸಿಂಹಲು – ಹಿ.ಆ.ಪ– (ವಾರ್ಡ್ 166 ಕರೀಸಂದ್ರ)
5. ಶ್ರೀ. ಕಲ್ಯಾಣ್ – ಕಿ.ಆ.ಪ (ಹೊರಗುತ್ತಿಗೆ ಆಧಾರದ ಮೇಲೆ) ವಾರ್ಡ್ 166 ಕರೀಸಂದ್ರ)
6. ಶ್ರೀ. ದಿನೇಶ್ – ಕಂದಾಯ ಪರಿವೀಕ್ಷಕರು – (ವಾರ್ಡ್ 166 ಕರೀಸಂದ್ರ)
7. ಘನತ್ಯಾಜ್ಯ ವಿಲೇವಾರಿ ಸೂಪರ್‌ವೈಸರ್‌ಗಳು – (ವಾರ್ಡ್ 166 ಕರೀಸಂದ್ರ)
8. ಶ್ರೀ. ರವಿಕುಮಾರ್ – ಕಿರಿಯ ಅಭಿಯಂತರರು (ಬೆಸ್ಕಾಂ)
9. ಶ್ರೀ. ಸಯದ್ – ಸಹಾಯಕ ಅಭಿಯಂತರರು, ಬಿಡಬ್ಲ್ಯೂಎಸ್ಎಸ್‌ಬಿ
10. 7ನೇ ಬ್ಲಾಕ್ ಜಯನಗರ ಮತ್ತು ಬನಶಂಕರಿ 2ನೇ ಹಂತದ ನಿವಾಸಿಗಳ ಸಂಘ ಸಂಸ್ಥೆಯ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು.

-----

ಮಾನ್ಯ ಅಧ್ಯಕ್ಷರು ಸಭೆಗೆ ಹಾಜರಿದ್ದ ಅಧಿಕಾರಿಗಳು ಹಾಗೂ ಸಮಿತಿ ಸದಸ್ಯರ ಹಾಜರಿದ್ದ ಸದಸ್ಯರು ಹಾಗೂ ಅಧಿಕಾರಿಗಳಿಗೆ ಸ್ವಾಗತ ಕೋರಿದರು. ಸಭೆಯನ್ನುದ್ದೇಶಿಸಿ ಮಾತನಾಡುತ್ತಾ, ಈ ಹಿಂದಿನ ಸಭೆಯಲ್ಲಿ ನಡೆದ ವಿಷಯಗಳ ಬಗ್ಗೆ ಚರ್ಚಿಸಲಾಗಿರುವ ಕುರಿತಂತೆ ಸಂಬಂಧಪಟ್ಟ ಅಧಿಕಾರಿಗಳು ಕೈಗೊಂಡಿರುವ ಕ್ರಮದ ಬಗ್ಗೆ ವಾರ್ಡ್ ಸಂಖ್ಯೆ–166ರ ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರು ರವರಿಗೆ ಪರಾಮರ್ಶೆಗಾಗಿ ವಿವರಿಸುವಂತೆ ಸೂಚಿಸಲಾಯಿತು.

ಈ ಹಿಂದಿನ ಸಭೆಯಲ್ಲಿ ಕಾರ್ಯಗತಗೊಳ್ಳದ ಕೆಲಸಕಾರ್ಯಗಳನ್ನು ಅಧಿಕಾರಿಗಳು ನಿಗಧಿತ ಅವಧಿಯೊಳಗೆ ಕಡ್ಡಾಯವಾಗಿ ಕ್ರಮಕೈಗೊಳ್ಳುವಂತೆ ಸೂಚಿಸಲಾಗಿ ಸಭೆ ಸೇರಿರುವ ಉದ್ದೇಶ ಮತ್ತು ಸಭೆಯ ಮಹತ್ವವನ್ನು ಗಂಭೀರವಾಗಿ ಪರಿಗಣಿಸುವಂತೆ ಸೂಚಿಸಲಾಯಿತು.

ಮುಂದುವರೆದು, ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

**1. ಕೋವಿಡ್–19 ಸಂಬಂಧ ಸೋಂಕು ಹರಡುವುದನ್ನು ತಡೆಗಟ್ಟುವ ಸಂಬಂಧ ತೆಗೆದುಕೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳ ಬಗ್ಗೆ.**

ಕಾವೇರಿನಗರ, ಅಂಬೇಡ್ಕರ್‌ನಗರ, ಪಾರ್ಕ್‌ಗಳ ಹತ್ತಿರ ಇರುವ ಕೊಳಚೆ ಪ್ರದೇಶಗಳಲ್ಲಿ ಹಾಗೂ 4ನೇ, 30ನೇ ಅಡ್ಡರಸ್ತೆ, ಜಯನಗರ 7ನೇ ಬ್ಲಾಕ್‌ನಲ್ಲಿ ನಿಲ್ಲುವ ಕಸದ ಲಾರಿ ಹತ್ತಿರ ಹಾಗೂ ವಾರ್ಡ್‌ನ ಯಾವುದೇ ನೀರು ನಿಲ್ಲುವಂತಹ ಪ್ರದೇಶದಲ್ಲಿ ಸೊಳ್ಳೆ ನಿಯಂತ್ರಿಸಲು ಔಷಧಿ ಸಿಂಪಡಣೆಗೆ ಆದೇಶಿಸಲಾಯಿತು.

**ಕ್ರಮ: ಆರೋಗ್ಯಾಧಿಕಾರಿಗಳು (ಪದ್ಮನಾಭನಗರ)**

**ಪು.ತಿ.ನೋ**

2. <u>ವಾರ್ಡ್ ವ್ಯಾಪ್ತಿಯಲ್ಲಿ ಕುಡಿಯುವ ನೀರು ಹಾಗೂ ಒಳಚರಂಡಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ.</u>

ಸುಮಾರು 4–5 ವರ್ಷಗಳಿಂದ 2ನೇ ಅಡ್ಡರಸ್ತೆ, ಜಯನಗರ 7ನೇ ಬ್ಲಾಕ್ ವೆಸ್ಟ್‌ನಲ್ಲಿ ಕುಡಿಯುವ ನೀರನ್ನು ಮಧ್ಯರಾತ್ರಿ ಸಮಯದಲ್ಲಿ ಬಿಡುತ್ತಿದ್ದಾರೆ ಎಂದು ಸಾರ್ವಜನಿಕರು ದೂರು ಸಲ್ಲಿಸಿರುವುದನ್ನು ತುರ್ತಾಗಿ ಪರಿಶೀಲಿಸಿ ನೀರಿನ ಸಂಪರ್ಕವನ್ನು ದುರಸ್ಥಿಗೊಳಿಸಿ ಸುಗಮಗೊಳಿಸಲು ಸೂಚಿಸಲಾಯಿತು.

ಜಯನಗರ 7ನೇ ಬ್ಲಾಕ್‌ನ 6ನೇ 7ನೇ ಮತ್ತು 8ನೇ ಅಡ್ಡರಸ್ತೆಯಲ್ಲಿ ಮಳೆ ಬಂದ ಸಮಯದಲ್ಲಿ ಮ್ಯಾನ್‌ಹೋಲ್‌ನಲ್ಲಿ ನೀರು ತುಂಬಿ ಮನೆಗೆ ನುಗ್ಗುತ್ತಿದೆ ಹಾಗೂ ರಸ್ತೆಯಲ್ಲಿ ನೀರು ಹರಿಯುತ್ತಿರುತ್ತದೆ ಎಂದು ಸಾರ್ವಜನಿಕರು ತಿಳಿಸಿದರು. ಬಿಡಬ್ಲ್ಯೂಎಸ್‌ಎಸ್‌ಬಿ ಇಲಾಖೆಯವರು ಸದರಿ ಪ್ರದೇಶದಲ್ಲಿ ಮ್ಯಾನ್‌ಹೋಲ್‌ಗಳನ್ನು ಸರಿಪಡಿಸಲು ಸೂಚಿಸಲಾಗಿದ್ದು, ಸದರಿ ಕಾಮಗಾರಿ ಪ್ರಕ್ರಿಯೆಯು ನಡೆಯುತ್ತಿರುವುದಾಗಿ ಸಹಾಯಕ ಅಭಿಯಂತರರು, ಬಿಡಬ್ಲ್ಯೂಎಸ್‌ಎಸ್‌ಬಿ ರವರು ಸ್ಪಷ್ಟಪಡಿಸಿದರು.

**ಕ್ರಮ: ಸ.ಅ & ಸ.ಕಾ.ನಿ.ಅ (ಬಿಡಬ್ಲ್ಯೂಎಸ್‌ಎಸ್‌ಬಿ)**

3. <u>ಕಾನೂನು ಮತ್ತು ಸುವ್ಯವಸ್ಥೆ ಹಾಗೂ ಟ್ರಾಫಿಕ್ ಪೋಲೀಸ್ ಇಲಾಖೆಗೆ ಸಂಬಂಧಿಸಿದ ವಿಷಯಗಳ ಬಗ್ಗೆ.</u>

- ವಾರ್ಡ್ ವ್ಯಾಪ್ತಿಯಲ್ಲಿ ಪಾದಚಾರಿ ಮಾರ್ಗಗಳ ಮೇಲೆ ಸಣ್ಣ–ಪುಟ್ಟ ಅಂಗಡಿಗಳಿದ್ದು ರಸ್ತೆಯಲ್ಲಿ ವಾಹನ ನಿಲುಗಡೆಯಿಂದಾಗಿ ಸಾರ್ವಜನಿಕರಿಗೆ ಪಾದಚಾರಿಗಳಲ್ಲಿ ಓಡಾಡಲು ಹಾಗೂ ವಾಹನ ಸಂಚಾರ ಅಡ್ಡಿಪಡಿಸಿರುವುದಾಗಿ ಸಾರ್ವಜನಿಕರು ತಿಳಿಸಿದರು.
- ಕೃಷ್ಣ ಗ್ರಾಂಡ್ ಹೋಟೆಲ್ ಮುಂಭಾಗ ವಾಹನ ನಿಲುಗಡೆಯಿಂದ ಇತರೆ ವಾಹನಗಳ ಸುಗಮ ಸಂಚಾರಕ್ಕೆ ತೊಂದರೆಯುಂಟಾಗಿರುವುದರಿಂದ ತೆಗೆಸುವಂತೆ ಸಾರ್ವಜನಿಕರು ತಿಳಿಸಿದರು.
- 32ನೇ ಅಡ್ಡರಸ್ತೆ, 4ನೇ ಮುಖ್ಯರಸ್ತೆ ಮತ್ತು 3ನೇ ಮುಖ್ಯರಸ್ತೆ, ಜಯನಗರ 7ನೇ ಬ್ಲಾಕ್‌ನಲ್ಲಿ ಡ್ರೈವಿಂಗ್ ಸ್ಕೂಲ್ ನಿಂದ ವಾಹನ ತರಭೇತಿಯಿಂದಾಗಿ ಸಾರ್ವಜನಿಕರಿಗೆ ಬೆಳಿಗ್ಗೆ ವಾಕಿಂಗ್ ಮಾಡಲು ಟ್ರಾಫಿಕ್ ಸಮಸ್ಯೆ ವಿಪರೀತವಾಗಿರುತ್ತದೆ ಎಂದು ಸಾರ್ವಜನಿಕರು ತಿಳಿಸಿದರು.
- ಬನಶಂಕರಿ ಸ್ಮಶಾನಗಳಲ್ಲಿ ಕೆಲವು ಕಿಡಿಗೇಡಿಗಳು ಮಧ್ಯಪಾನ ಹಾಗೂ ಗಾಂಜ ಸೇವನೆ ಮಾಡುತ್ತಿರುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಹಾಗೂ ಸದರಿ ಪ್ರದೇಶದಲ್ಲಿ ಸುತ್ತಮುತ್ತಲು ಸಿಸಿಟಿವಿ ಅಳವಡಿಸುವುದು ಅವಶ್ಯಕತೆ ಇರುವುದಾಗಿ ಸಾರ್ವಜನಿಕರು ತಿಳಿಸಿದರು.
- ಬೆಂಗಳೂರು ಇಂಟರ್‌ನ್ಯಾಷನಲ್ ಶಾಲೆ ಹತ್ತಿರ ಟ್ರಾಫಿಕ್ ಜಾಮ್ ಉಂಟಾಗುತ್ತಿರುತ್ತದೆ. ಅದನ್ನು ಕಡಿಮೆ ಮಾಡುವಂತೆ ಸಾರ್ವಜನಿಕರು ತಿಳಿಸಿದರು.
- ರಜಾತಾದ್ರಿ ಹೊಟೆಲ್ ಬಳಿ ಪಾದಚಾರಿಗಳಿಗೆ ಅನುಕೂಲವಾಗುವಂತೆ ಜೀಬ್ರಾ ಕ್ರಾಸಿಂಗ್ ಬೇಕೆಂದು ಸಾರ್ವಜನಿಕರು ತಿಳಿಸಿದರು.
- ಜೆ.ಎಸ್.ಎಸ್ ವೃತದಲ್ಲಿ 12ನೇ ಅಡ್ಡರಸ್ತೆಯಿಂದ 13ನೇ ರಸ್ತೆಯವರೆಗೆ ಇರುವ ಏಕಮುಖ ಮಾರ್ಗವನ್ನು ತೆರವುಗೊಳಿಸಲು ಕೋರಿದರು.

**ಕ್ರಮ: <u>ಕಾನೂನು ಮತ್ತು ಸುವ್ಯವಸ್ಥೆ ಹಾಗೂ ಟ್ರಾಫಿಕ್ ಪೋಲೀಸ್</u> / ಸ.ಕಾ.ನಿ.ಅ (ಬನಶಂಕರಿ), /ಸ.ಆ ವಾ–166 / ಆರೋಗ್ಯಾಧಿಕಾರಿಗಳು (ಪದ್ಮನಾಭನಗರ)/ಸ.ಕಾ.ನಿ.ಅ(ವಿದ್ಯುತ್–ದಕ್ಷಿಣ) ಬಿಬಿಎಂಪಿ**

4. <u>ವಾರ್ಡ್‌ನಲ್ಲಿ ಘನತ್ಯಾಜ್ಯ ಸಂಗ್ರಹಣೆ ಮತ್ತು ವಿಲೇವಾರಿ ಬಗ್ಗೆ.</u>

- ವಾರ್ಡ್ ವ್ಯಾಪ್ತಿಯಲ್ಲಿ ಸಿಲ್ಟ್ ಅಂಡ್ ಟ್ರಾಕ್ಟರ್‌ಗಳು ಕಾರ್ಯನಿರ್ವಹಿಸಿರುವ ಬಗ್ಗೆ ಮಾಹಿತಿಯನ್ನು ಕೇಳಲಾಯಿತು.
- ಎ.ಕೆ.ಕಾಲೋನಿಯ ವ್ಯಾಪ್ತಿಯ ರಸ್ತೆಗಳಲ್ಲಿ ಡೆಬ್ರಿಸ್‌ಗಳು ಇರುವುದರಿಂದ ಕಸ ತೆಗೆಯಲು ತೊಂದರೆಯಾಗಿರುತ್ತದೆ ಎಂದು ತಿಳಿಸಿದ ಮೇರೆಗೆ ಕಾಮಗಾರಿ ಇಲಾಖೆಯು ಸದರಿ ಡೆಬ್ರಿಸ್‌ಗಳನ್ನು ಕೂಡಲೇ ತೆರವುಗೊಳಿಸಲು ಕ್ರಮಕೈಗೊಳ್ಳುವಂತೆ ಸೂಚಿಸಿದರು.

- ವಾರ್ಡ್ ವ್ಯಾಪ್ತಿಯಲ್ಲಿರುವ ಮೋನೋಟೈಪ್ ಹಾಗೂ ಸುತ್ತಾ ಮುತ್ತಾ ಕರೆಂಟ್ ಕಂಬಗಳ ಹತ್ತಿರವಿರುವ ಗುಂಡಿಗಳಲ್ಲಿ ಸಾರ್ವಜನಿಕರು ಕಸವನ್ನು ಹಾಕುತ್ತಿರುವುದರಿಂದ ಸುಗಮ ಓಡಾಟಕ್ಕೆ ಕಷ್ಟಕರವಾಗಿರುತ್ತದೆ ಎಂದು ತಿಳಿಸಿದರು.

**ಕ್ರಮ: ಸ.ಕಾ.ನಿ.ಅ (ಘನತ್ಯಾಜ್ಯ) ಹಾಗೂ ಕಿರಿಯ ಆರೋಗ್ಯ ಪರಿವೀಕ್ಷಕರು**

**5. ವಾರ್ಡ್‌ನ ವಿವಿಧ ಕಾಮಗಾರಿಗಳ ಅಭಿವೃದ್ಧಿ ಕಾರ್ಯಗಳ ಬಗ್ಗೆ.**

- ವಾರ್ಡ್ ವ್ಯಾಪ್ತಿಯಲ್ಲಿ ಕೆಲಸ ಕಾರ್ಯಗಳು ಹಾಗೂ ಕಾಮಗಾರಿಗಳು ಆಗಿಂದಾಗೆ ಸಮರ್ಪಕವಾಗಿ ನೆರವೇರಿಸಲಾಗುತ್ತಿರುತ್ತದೆ ಎಂದು ಸಾರ್ವಜನಿಕರು ಪ್ರಶಂಸೆ ವ್ಯಕ್ತಪಡಿಸಿದರು.

**6. ಇನ್ನಿತರೆ ವಿಷಯಗಳು ಅಧ್ಯಕ್ಷರ ಸೂಚನೆಯಂತೆ.**

- 6ನೇ ಅಡ್ಡರಸ್ತೆ, 7ನೇ ಅಡ್ಡರಸ್ತೆ, 8ನೇ ಅಡ್ಡರಸ್ತೆ ಮತ್ತು 11ನೇ ಅಡ್ಡರಸ್ತೆಗಳಲ್ಲಿ ಮರದ ರೆಂಬೆ ಕೊಂಬೆಗಳನ್ನು ತೆರವುಗೊಳಿಸಲು ಈಗಾಗಲೇ ಸೂಚಿಸಿದ್ದರೂ ಸಹ ಇದುವರೆಗೂ ಕ್ರಮ ಕೈಗೊಂಡಿರುವುದಿಲ್ಲ ಎಂದು ಸಾರ್ವಜನಿಕರು ದೂರು ನೀಡಿದರು.

**ಕ್ರಮ: ಅರಣ್ಯ ಅಧಿಕಾರಿ (ದಕ್ಷಿಣ–ಬಿಬಿಎಂಪಿ)**

- ಪ್ರಸ್ತುತ ವಾರ್ಡ್‌ಗಳು ವಿಭಜನೆಯಾಗಿರುವಂತೆ ವಾರ್ಡ್–166 'ಕರೀಸಂದ್ರ' ಹೆಸರನ್ನು ಬದಲಿಸಿ 'ಉಮಾಮಹೇಶ್ವರಿ' ಎಂದು ಪ್ರಕಟಿಸಲಾಗಿರುವುದನ್ನು ಬಹಳ ಹಿಂದಿನ ಕರೀಸಂದ್ರ ಗ್ರಾಮದ ಇತಿಹಾಸವಿರುವುದನ್ನು ಹಾಗೆಯೇ ಉಳಿಸಬೇಕೆಂದು 7ನೇ ಬ್ಲಾಕ್ ಜಯನಗರ ಮತ್ತು ಬನಶಂಕರಿ 2ನೇ ಹಂತದ ನಿವಾಸಿಗಳ ಸಂಘ ಸಂಸ್ಥೆಯ ಪದಾಧಿಕಾರಿಗಳು ಕೋರಿದರು. ಹಾಗೂ 'ಉಮಾಮಹೇಶ್ವರಿ' ಬದಲಾಗಿ 'ಉಮಾಮಹೇಶ್ವರ' ಎಂದು ಬದಲಾಯಿಸಬಹುದಾಗಿರುತ್ತದೆ ಅಭಿಪ್ರಾಯಿಸಿದರು.

  ಮಾನ್ಯ ಅಧ್ಯಕ್ಷರು ಮಾತನಾಡಿ ಸದರಿ ವಿಷಯದ ಕುರಿತು ಸರ್ಕಾರದ ಹಂತದಲ್ಲಿ ಪರಿಶೀಲನೆ ಪ್ರಕ್ರಿಯೆಯಲ್ಲಿರುವುದರಿಂದ ಸೂಕ್ತ ಪ್ರಸ್ತಾವನೆಯನ್ನು ನೇರವಾಗಿ ಸರ್ಕಾರದ ನಗರಾಭಿವೃದ್ಧಿ ಇಲಾಖೆಗೆ ಸಲ್ಲಿಸಬಹುದಾಗಿದೆ ಎಂದು ಸ್ಪಷ್ಟಪಡಿಸಿದರು.

- Ward Disaster Management Cell(WDMC) ವಾರ್ಡ್ ವಿಪತ್ತು ನಿರ್ವಹಣಾ ಕೋಶವನ್ನು ಮತ್ತಷ್ಟು ಸಕ್ರಿಯಗೊಳಿಸಲು ಬೇಕಾಗಿರುವ ರೂಪುರೇಷಗಳ ಬಗ್ಗೆ 7ನೇ ಬ್ಲಾಕ್ ಜಯನಗರ ಮತ್ತು ಬನಶಂಕರಿ 2ನೇ ಹಂತದ ನಿವಾಸಿಗಳ ಸಂಘ ಸಂಸ್ಥೆಯ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು ಹಾಗೂ ಸರ್ವಜನಿಕರಿಗೆ ಅರಿವು ಮೂಡಿಸಿ ಅದರಂತೆ ಸ್ಥಳೀಯರಲ್ಲಿ ಈ ಬಗ್ಗೆ ಕಾರ್ಯದರ್ಶಿಗಳು ಸದಸ್ಯರಿಗೆ ಕ್ರಮಕೈಗೊಳ್ಳಲು ಚರ್ಚಿಸಲಾಯಿತು.

ಈ ಎಲ್ಲಾ ವಿಷಯದ ಬಗ್ಗೆ ಚರ್ಚಿಸಲಾಗಿ ಸೂಕ್ತ ಕ್ರಮ ಕೈಗೊಳ್ಳುವ ನಿರೀಕ್ಷಣೆಯೊಂದಿಗೆ ವಾರ್ಡ್ ಸಂಖ್ಯೆ 166ರ ಸಮಿತಿಯ ಅಧ್ಯಕ್ಷರು ಹಾಗೂ ನೋಡೆಲ್ ಅಧಿಕಾರಿಗಳಾದ ಶ್ರೀ. ಪ್ರದೀಪ್ ರಾಥೋಡ್ ರವರು ಎಲ್ಲರಿಗೂ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ವಾರ್ಡ್ ಸಮಿತಿ ಸಂಚಾಲಕರು**
**ವಾರ್ಡ್ ಸಂಖ್ಯೆ 166**

**ನೋಡೆಲ್ ಅಧಿಕಾರಿ**
**ವಾರ್ಡ್ ಸಂಖ್ಯೆ 166**








